ಇ) ಮನಗಂಡಿದ್ದರೆ, ಯಾವಾಗ ತಡೆಗೋಡೆ ನಿರ್ಮಿಸಲಾಗುವುದು?

ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು):

ಅ) ಬಂದಿದೆ

ಆ) ಮತ್ತು ಇ) ಹೌದು. ಉಪ್ಪುನೀರು ನಿಯಂತ್ರಿಸಲು ಕುಮಟಾ ತಾಲ್ಲೂಕಿನಲ್ಲಿ 15 ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ 7 ಉಪ್ಪುನೀರು ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಸದರಿ ಯೋಜನೆಗಳಿಂದ ಕ್ರಮವಾಗಿ 3131 ಹೆಕ್ಟೇರ್ ಹಾಗೂ 952 ಹೆಕ್ಟೇರ್ ಭೂಮಿ ಉಪ್ಪುನೀರು ನುಗ್ಗುವಿಕೆಯಿಂದ ಸಂರಕ್ಷಣೆಯಾಗುತ್ತಿದೆ.

ಇದಲ್ಲದೆ, ಅನುದಾನದ ಲಭ್ಯತೆಯ ಮೇರೆಗೆ ಅಗತ್ಯವಿರುವ ಕಡೆ ಉಪ್ಪುನೀರು ತಡೆಗೋಡೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

845 (1190) ಶ್ರೀ ಮುನಿಯಪ್ಪ ಎಸ್.ಎಂ. (ಚಿಕ್ಕಬಳ್ಳಾಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಸೇನಾ ನಿಗಮದಿಂದ ವಿದ್ಯಾರ್ಥಿ ನಿಲಯಗಳು ಸಮುದಾಯ ಭವನಗಳು ಹಾಗೂ ಇತರೇ ಕಟ್ಟಡ ಕಾಮಗಾರಿಗಳು ಬೇರೆ ಇಲಾಖೆಗಳಿಂದ ಕೈಗೊಂಡಿರುವ ಕಾಮಗಾರಿಗಳು ತ್ವರಿತವಾಗಿ ನಡೆಯುತ್ತಿರುವಂತೆ ಭೂಸೇನಾ ನಿಗಮದಿಂದ ನಡೆಯುತ್ತಿರುವ ಕಾಮಗಾರಿಗಳು ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಇಲಾಖೆಯ ಕಾಮಗಾರಿಗಳು ತ್ವರಿತ ಗತಿಯಲ್ಲಿ ನಡೆಯುವಂತೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಬಂದಿದೆ.

ಆ) ಸಿಮೆಂಟ್ ಕೃತಕ ಅಭಾವ ಹಾಗೂ ಕಾಮಗಾರಿ ವಹಿಸಿದ ಇಲಾಖೆಗಳಿಂದ ಅನುದಾನ ಬಿಡುಗಡೆಯಾಗದ ಅಥವಾ ಪ್ರಗತಿ ಹಂತವಾರು ಅನುದಾನ ಬಿಡುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ, ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಅನುದಾನ ಬಿಡುಗಡೆಯಾದಂತೆ ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.